# ಸ್ವಾಮಿ ವಿವೇಕಾನಂದರು ಕಂಡ ಆದರ್ಶ ಗೃಹಸ್ಥ

ಸ್ವಾಮಿ ಆತ್ಮಜ್ಞಾನಂದ

**ಸ್ವಾಮಿ ವಿವೇಕಾನಂದರು ಸಂನ್ಯಾಸಿಯ ಆದರ್ಶಕ್ಕೆ ಕೊಟ್ಟಷ್ಟೇ ಮಹತ್ವವನ್ನು ಗೃಹಸ್ಥ ಧರ್ಮಕ್ಕೂ ಕೊಟ್ಟಿದ್ದಾರೆ. ಗೃಹಸ್ಥರಲ್ಲೂ ನಾಗಮಹಾಶಯರಂತಹ ಶ್ರೇಷ್ಠ ಸಾಧಕರಿದ್ದಾರೆ ಎಂಬುದನ್ನು ಮನಗಂಡಿದ್ದ ಅವರು, ಗೃಹಸ್ಥ ಧರ್ಮವನ್ನು ಕುರಿತು ತಮ್ಮ ಕೃತಿಗಳಲ್ಲಿ ಸಾಕಷ್ಟು ವಿವರಿಸಿದ್ದಾರೆ. ಈ ಕುರಿತು ಬರೆದಿರುವ ಪೂಜ್ಯ ಸ್ವಾಮೀಜಿಯವರು 'ವಿವೇಕಪ್ರಭ' ದ ಸಂಪಾದಕರಾಗಿದ್ದರು. ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರೂ ಆಗಿದ್ದ ಅವರು ಪ್ರಸ್ತುತ ಚಂಡೀಗಢ ರಾಮಕೃಷ್ಣ ಮಿಷನ್ ಆಶ್ರಮದ ಅಧ್ಯಕ್ಷರಾಗಿದ್ದಾರೆ.**

**ಭಾ**ರತೀಯ ಪರಂಪರೆಯಲ್ಲಿ ಕಂಡುಬರುವ ಒಂದು ಪ್ರಮುಖ ಅಂಶವೆಂದರೆ ವರ್ಣಾಶ್ರಮ ಧರ್ಮ. ಒಬ್ಬ ಮಾನವನ ಜೀವಿತಕಾಲವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ ಪ್ರತಿಯೊಂದು ಹಂತಕ್ಕೂ ನಿರ್ದಿಷ್ಟ ಆಚರಣೆಗಳನ್ನು ಸ್ಮೃತಿಶಾಸ್ತ್ರಗಳು ವಿಧಿಸಿರುತ್ತವೆ. ಜಾಬಾಲ ಉಪನಿಷತ್ತಿನಲ್ಲಿ ಹೀಗೆ ಹೇಳಿದೆ, ''ಬ್ರಹ್ಮಚರ್ಯದ ನಂತರ ಗೃಹಿಯಾಗು. ಗೃಹಸ್ಥಾಶ್ರಮವನ್ನು ಪೂರ್ಣಗೊಳಿಸಿದ ನಂತರ ವಾನಪ್ರಸ್ಥವನ್ನು ಸ್ವೀಕರಿಸಬೇಕು. ಸಂಸಾರದಿಂದ ವಿಮುಖವಾಗಿದ್ದು, ಸಂನ್ಯಾಸವನ್ನು ಸ್ವೀಕರಿಸಬೇಕು. ಅಥವಾ ಬ್ರಹ್ಮಚರ್ಯಾಶ್ರಮದಲ್ಲಿ ಇರುವಾಗಲೇ ನೇರವಾಗಿ ಸಂನ್ಯಾಸವನ್ನು ಸ್ವೀಕರಿಸಬಹುದು. ಗಾರ್ಹಸ್ಥ್ಯದಿಂದ ಅಥವಾ ವಾನಪ್ರಸ್ಥದಿಂದಲೂ ಸಂನ್ಯಾಸವನ್ನು ಸ್ವೀಕರಿಸಬಹುದು. ಯಾವಾಗ ವೈರಾಗ್ಯ ಮೈದೋರುವುದೋ ಆಗ ಸಂನ್ಯಾಸವನ್ನು ಹೊಂದಬಹುದು.'' ಬ್ರಹ್ಮಚರ್ಯೆ, ಗಾರ್ಹಸ್ಥ್ಯ, ವಾನಪ್ರಸ್ಥ ಹಾಗೂ ಸಂನ್ಯಾಸ — ಇವೇ ವರ್ಣಾಶ್ರಮ ಧರ್ಮದ ನಾಲ್ಕು ಭಾಗಗಳು. ಪ್ರಮುಖವಾಗಿ ಸಮಾಜದಲ್ಲಿ ಕಂಡುಬರುವುದು ಗೃಹಸ್ಥಾಶ್ರಮವನ್ನು ಅನುಸರಿಸುವವರು, ಅಂದರೆ ಸಂಸಾರದಲ್ಲಿದ್ದುಕೊಂಡು ಧಾರ್ಮಿಕ ಜೀವನವನ್ನು ನಡೆಸುತ್ತಿರುವವರು.



## ಗೃಹಸ್ಥ ಧರ್ಮ

ಗುರುಕುಲದಲ್ಲಿ ಅಧ್ಯಯನಾದಿಗಳನ್ನು ಮುಗಿಸಿ, ದೇಹ-ಮನಸ್ಸುಗಳನ್ನು ಪಳಗಿಸಿಕೊಂಡು ಹಾಗೂ ಧರ್ಮದ ಬಗ್ಗೆ ಸ್ಪಷ್ಟವಾಗಿ ತಿಳಿದುಕೊಂಡು, ತನ್ನ ಜೀವನದಲ್ಲಿ ಸಾಧಿಸಬೇಕಾದ ಲಕ್ಷ್ಯವನ್ನು ಕಂಡುಕೊಳ್ಳುವ ಸದುದ್ದೇಶದಿಂದ ವ್ಯಕ್ತಿಯು ಶ್ರೇಯಸ್ಸು ಪ್ರೇಯಸ್ಸುಗಳ ವಿವೇಚನೆಯನ್ನು ಹೊಂದಿದವನಾಗಿ, ಮೋಕ್ಷಸಾಧನೆಗಾಗಿ ಅಭ್ಯುದಯ ಅಥವಾ ನಿಃಶ್ರೇಯಸವನ್ನು ಬಯಸಬೇಕು ಎಂದು ಧರ್ಮಶಾಸ್ತ್ರಗಳು ವಿಧಿಸುತ್ತವೆ. ಗೃಹಸ್ಥನಾಗಿದ್ದುಕೊಂಡು ಸಂಸಾರದ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿಭಾಯಿಸುತ್ತ, ದಾನಧರ್ಮಾದಿಗಳನ್ನು, ಸ್ವಾಧ್ಯಾಯ ಪ್ರವಚನಾದಿಗಳನ್ನು ಮಾಡುತ್ತ ಚಿತ್ತಶುದ್ಧಿಯನ್ನು ಸಾಧಿಸಿ ಎಲ್ಲ ಜೀವಿಗಳ ಏಕೈಕ ಲಕ್ಷ್ಯವಾಗಿರುವ ಮೋಕ್ಷವನ್ನು ಹೊಂದಲು ಬಯಸಬೇಕು ಎಂದು ಅದರಲ್ಲಿ ಹೇಳಿದೆ. ತೈತ್ತಿರೀಯ ಉಪನಿಷತ್ತಿನಲ್ಲಿ ಅನುಶಾಸನಪರ್ವದಲ್ಲಿ ಗುರುಗಳು ವ್ಯಾಸಂಗವನ್ನು ಮುಗಿಸಿರುವ ಬ್ರಹ್ಮಚಾರಿ ಶಿಷ್ಯರಿಗೆ ನೀಡುವ ಉಪದೇಶವನ್ನು ಗಮನಿಸಿದರೆ, ಗೃಹಸ್ಥಾಶ್ರಮದಲ್ಲಿ ಸಾಧಿಸಬೇಕಾದ ಎಲ್ಲ ಆದರ್ಶಗಳ ಪರಿಚಯ ನಮಗಾಗುವುದು: ''ಸತ್ಯವನ್ನೇ ನುಡಿಯುವವನಾಗು, ಧರ್ಮ-ಮಾರ್ಗದಲ್ಲಿ ನಡೆಯುವವನಾಗು. ಸ್ವಾಧ್ಯಾಯದಲ್ಲಿ ದೋಷವಿಲ್ಲದಿರಲಿ. ಆಚಾರ್ಯರಿಗೆ (ಗುರು ಸಮಾನರಾದವರಿಗೆ) ಧನಾದಿ ಬಯಕೆಗಳನ್ನು ನೀಡುತ್ತ ವಂಶಪರಂಪರೆಗೆ ಚ್ಯುತಿಬಾರದಂತೆ ಆಚರಣೆಯಿರಲಿ. ಸತ್ಯದ ಪರಿಪಾಲನೆಯಲ್ಲಿ ಜಾಗರೂಕನಾಗಿರು. ಧರ್ಮದ ಅನುಷ್ಠಾನದಲ್ಲಿ ನಿಷ್ಠೆಯಿರಲಿ. ನಿನ್ನ ಮನೆತನದ ಕುಶಲವನ್ನು ಕಾಪಾಡುವ ಜವಾಬ್ದಾರಿ ನಿನ್ನದು. ಇತರರ (ಸಮಾಜದ ಹಾಗೂ ಪ್ರಾಣಿವರ್ಗದ) ಹಿತಕ್ಕಾಗಿ ಬೇಕಾದ (ದಾನ-ಧರ್ಮ-ಸೇವಾ) ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು.

ನಿನ್ನ ಅಧ್ಯಯನ (ವಿದ್ಯೆಯನ್ನು ಗಳಿಸಿಕೊಳ್ಳುವುದು ಹಾಗೂ ಈಗಾಗಲೇ ಗಳಿಸಿರುವ ವಿದ್ಯೆಯನ್ನು ಉಳಿಸಿಕೊಳ್ಳುವುದು) ಹಾಗೂ ಪ್ರವಚನಗಳನ್ನು (ಇತರರಿಗೆ ಹೇಳಿಕೊಡುವುದರ ಮೂಲಕ ಸಮಾಜದಲ್ಲಿ ಧರ್ಮವನ್ನು ಸ್ಥಾಪಿಸುವ ಜವಾಬ್ದಾರಿಯನ್ನು) ಉಪೇಕ್ಷಿಸಬೇಡ. ದೇವತೆಗಳಿಗೆ ಹಾಗೂ ಪಿತೃಗಳಿಗೆ ಸಲ್ಲಬೇಕಾದ ಕರ್ಮಕ್ರಿಯೆಗಳನ್ನು ತಪ್ಪದೇ ಮಾಡುವವನಾಗು. ತಾಯಿ, ತಂದೆ, ಆಚಾರ್ಯರನ್ನು ಹಾಗೂ ಅತಿಥಿಗಳನ್ನು ದೇವರೆಂದೇ ತಿಳಿ. ನಿಂದಾರ್ಹವಿಲ್ಲದ ಕರ್ಮಗಳನ್ನು ಅನುಸರಿಸಿ ಉಳಿದದ್ದನ್ನು ತ್ಯಜಿಸು. ಯಾವುದನ್ನು ಒಳ್ಳೆಯ ನಡತೆಯೆಂದು (ಸಮಾಜ ಗುರುತಿಸುತ್ತದೆಯೋ ಹಾಗೂ ಧರ್ಮಶಾಸ್ತ್ರಗಳು ವಿಧಿಸುತ್ತವೆಯೋ) ಹೇಳಲಾಗಿದೆಯೋ ಅವುಗಳನ್ನು ಮಾತ್ರ ಅನುಸರಿಸುವವನಾಗು; ಕೆಟ್ಟ ನಡತೆಯನ್ನು ಬಿಡುವವನಾಗು.''

## ಗೃಹಸ್ಥರ ಜವಾಬ್ದಾರಿಗಳು

ಗೃಹಸ್ಥನು ಸಮಾಜದ ರಕ್ಷಣೆಯನ್ನು ಮಾಡಬೇಕು. ಸುಸಂಸ್ಕೃತನಾಗಿದ್ದು ಉತ್ತಮ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ನೀಡಿ ಉತ್ತಮ ನಡವಳಿಕೆ ಹಾಗೂ ಚಾರಿತ್ರ್ಯವನ್ನು ಹೊಂದಿದವರನ್ನಾಗಿ ಬೆಳೆಸಬೇಕು. ವೇದಗಳ ಕಾಲದಲ್ಲಿ ಗೃಹಸ್ಥನಾದವನು 'ಗಾರ್ಹಪತ್ಯ ಅಗ್ನಿಯನ್ನು' ಅಂದರೆ 'ಗೃಹಪತಿಯು ಸಂರಕ್ಷಿಸುವ ಅಗ್ನಿಯನ್ನು' ಕಾಪಾಡುತ್ತ ನಿತ್ಯ ಹಾಗೂ ನೈಮಿತ್ತಿಕ ಕ್ರಿಯೆಗಳನ್ನು ನಿಷ್ಠೆಯಿಂದ ಮಾಡಬೇಕು. ಉತ್ತಮ ಪ್ರಜೆಗಳನ್ನು ರೂಪಿಸುವ, ಮುಂದಿನ ಪೀಳಿಗೆಗಳಿಗೆ ನಮ್ಮ ನಾಡಿನ ಸಂಸ್ಕೃತಿ ಹಾಗೂ ಪರಂಪರೆಗಳು ವರ್ಗಾವಣೆಗೊಳ್ಳುವಂತೆ ಮಕ್ಕಳನ್ನು ಪೋಷಿಸುವ ಸಾಮರ್ಥ್ಯ ಗೃಹಸ್ಥರಿಗೆ ಇರಬೇಕು. ತಮ್ಮ ದೇಹಸುಖಕ್ಕಾಗಿ ಮಕ್ಕಳನ್ನು ಹಡೆದು ಸಮಾಜಕ್ಕೆ ಅವರು ಹೊರೆಯಾಗುವ ಪರಿಸ್ಥಿತಿ ಬಾರದಂತೆ ಗೃಹಸ್ಥರಾದ ಪತಿ-ಪತ್ನಿಯರು ನಿರ್ಧರಿಸಿ ಬಾಳಬೇಕು. ಶ್ರೀರಾಮಕೃಷ್ಣರು ಹೇಳುತ್ತಿದ್ದರು : ''ಗೃಹಸ್ಥನು ಸಂಸಾರದಲ್ಲಿದ್ದುಕೊಂಡು ಎಲ್ಲ ಕಾಮನೆ-ಬಯಕೆಗಳನ್ನು ತನ್ನ ಹದ್ದುಬಸ್ತಿನಲ್ಲಿಟ್ಟುಕೊಂಡು ಸಾಧನೆ ಮಾಡಬೇಕು. ಇದು ಹೇಗೆಂದರೆ ಕೋಟೆಯ ಹೊರಗಡೆ ನಿಂತು ಎದುರಾಳಿಗಳನ್ನು ಧೈರ್ಯದಿಂದ ಪರಾಜಯಗೊಳಿಸುವ ಸೈನಿಕರಂತೆ.'' ಸಂನ್ಯಾಸಿಯು ಎಲ್ಲವನ್ನೂ ತ್ಯಜಿಸಿ ಸಂಸಾರದ ಬಂಧನಗಳನ್ನು ಕೊಡವಿಹಾಕಿ ಕೋಟೆಯ ಒಳಗಿದ್ದು ಸಾಧನೆ ಮಾಡಿದಂತೆ. ''ಗೃಹಸ್ಥರು ಈ ಸಂಸಾರದ ಕೋಟೆಯನ್ನು ಭದ್ರವಾಗಿಟ್ಟು ಅದರ ಒಳಗಿದ್ದು, ಅಂತರ್ಮುಖಿಗಳಾಗಿ ಸಾಧನೆ ಮಾಡುತ್ತಿರುವ ಸಂನ್ಯಾಸಿಗಳನ್ನು ಪೋಷಿಸಿ ಕಾಪಾಡುತ್ತಾರೆ. ಒಂದು ಹಕ್ಕಿಯ ಎರಡು ರೆಕ್ಕೆಗಳಿದ್ದಂತೆ — ಸಂಸಾರಿ ಹಾಗೂ ಸಂನ್ಯಾಸಿ'' ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಸಂನ್ಯಾಸಿಯನ್ನು ಕಂಡು ಗೃಹಸ್ಥರು ಮನಸ್ಸಿನಲ್ಲಿ ವಿವೇಕವನ್ನು ಜಾಗೃತಗೊಳಿಸಿಕೊಳ್ಳುತ್ತಾರೆ; ಗೃಹಸ್ಥರಿಗೆ ಉತ್ತಮ ವಿಚಾರಗಳನ್ನು ನೀಡುತ್ತ, ಆದರ್ಶ ಜೀವನದ ಧ್ಯೇಯಗಳನ್ನು ಬೋಧಿಸುತ್ತ ಸಂನ್ಯಾಸಿಗಳು ಅವರಿಂದ ಪಡೆದುಕೊಂಡ ಭಿಕ್ಷೆಯ ಬದಲಾಗಿ ಜ್ಞಾನವನ್ನು ನೀಡುತ್ತಾರೆ. **'ಪರಸ್ಪರಂ ಭಾವಯಂತಃ ಶ್ರೇಯಃ ಪರಮಾಪ್ಸ್ಯಥ'** ಎಂಬ ನುಡಿಯಂತೆ ಒಬ್ಬರು ಮತ್ತೊಬ್ಬರನ್ನು ಬೆಂಬಲಿಸುತ್ತ ಇಬ್ಬರೂ ಶ್ರೇಯಸ್ಸಿನ ಪಥದಲ್ಲಿ ಮುನ್ನಡೆಯುತ್ತಾರೆ.

## ಗೃಹಸ್ಥರಲ್ಲಿರಬೇಕಾದ ನೀತಿಗಳು

ಸ್ವಾಮಿ ವಿವೇಕಾನಂದರ ವಿಚಾರಗಳಲ್ಲಿ ಇಂದಿನ ಕಾಲಕ್ಕನುಗುಣವಾಗಿ ನಾವು ಹೇಗೆ ಬಾಳಬೇಕು ಎಂಬುದರ ಬಗ್ಗೆ ಬಹಳಷ್ಟು ಮಾಹಿತಿಗಳು ದೊರೆಯುತ್ತದೆ. ವ್ಯಕ್ತಿಯ ಸರ್ವಾಂಗೀಣ ವಿಕಾಸಕ್ಕೆ ಎಷ್ಟು ಪ್ರಾಧಾನ್ಯತೆಯನ್ನು ಸ್ವಾಮೀಜಿ ನೀಡಿದ್ದರೋ ಸಮಾಜದ ಸರ್ವಾಂಗೀಣ ಬೆಳವಣಿಗೆಗೂ ಅಷ್ಟೇ ಒತ್ತನ್ನು ನೀಡಿದ್ದಾರೆ. ವ್ಯಕ್ತಿಯು ಚಾರಿತ್ರ್ಯವಂತನಾಗಿದ್ದರೆ, ಜವಾಬ್ದಾರಿಯುತನಾಗಿ ವಿವೇಕದಿಂದ ವರ್ತಿಸಿದರೆ, ಸಮಾಜದಲ್ಲಿನ ಸಮಸ್ಯೆಗಳು ಬಗೆಹರಿದು ಸರ್ವತೋಮುಖ ಅಭಿವೃದ್ಧಿ ಕಂಡುಬರುವುದು. ಪ್ರತಿಯೊಬ್ಬರೂ ತಮ್ಮ ತಮ್ಮ ಸ್ವಭಾವಕ್ಕೆ ಅನುಗುಣವಾಗಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು ಹಾಗೂ ಇತರರ ವ್ಯಕ್ತಿತ್ವವನ್ನು ಗೌರವಿಸಿ, ಅವರು ತಮ್ಮತನವನ್ನು ಬೆಳೆಸಿಕೊಳ್ಳುವಂತೆ ಸ್ವಾತಂತ್ರ್ಯವನ್ನು ನೀಡಬೇಕು. ಸ್ವಾತಂತ್ರ್ಯವಿದ್ದಾಗ ಮಾತ್ರ ವಿಕಾಸ, ಬೆಳವಣಿಗೆ ಸಾಧ್ಯವಾಗುತ್ತದೆ ಎಂದು ಸ್ವಾಮೀಜಿ ಮತ್ತೆ ಮತ್ತೆ ಹೇಳುತ್ತಿದ್ದರು.(Freedom is the first sign of growth) 'ವಿಕಾಸವೇ ಜೀವನ ಸಂಕುಚಿತಗೊಳ್ಳುವುದೇ ಮರಣ' ಎಂದೂ ಅವರು ಹೇಳಿದ್ದಾರೆ. (Expansion is life, contraction is death).

ಗೃಹಸ್ಥನಲ್ಲಿರಬೇಕಾದ ಒಂದು ಪ್ರಮುಖ ಗುಣವೇ ಧೈರ್ಯ. ತನ್ನ ಮನೆಯ ಎಲ್ಲ ಸದಸ್ಯರನ್ನು ಪೋಷಿಸಿ ಕಾಪಾಡಲು, ಸವಾಲುಗಳನ್ನು ಎದುರಿಸಲು ಗೃಹಸ್ಥನಲ್ಲಿ ಆತ್ಮವಿಶ್ವಾಸ ಹಾಗೂ ಧೀರತನವಿರಬೇಕು. ಇಂತಹ ಸಾತ್ವಿಕ ಧೈರ್ಯದಿಂದ ಸಹಜವಾಗಿ ಅವನಲ್ಲಿ ಸಹನೆ, ಅಹಿಂಸೆಗಳು ಕಂಡುಬರುವುವು. ಸಮಾಜದ ಎಲ್ಲ ಆಗುಹೋಗುಗಳ ಬಗ್ಗೆ ತಿಳಿದುಕೊಂಡು ಉದಾಸೀನನಾಗಿರದೆ, ಸಕ್ರಿಯವಾಗಿ ಸಹಬಾಳ್ವೆಗೆ ಬೇಕಾದ ಧರ್ಮ- ನೀತಿಗಳನ್ನು ಸಂರಕ್ಷಿಸಬೇಕು. ಸಮಾಜಮುಖೀ ಭಾವನೆಯುಳ್ಳ ಕ್ರಿಯಾಶೀಲ ವ್ಯಕ್ತಿಗಳನ್ನು ಸ್ವಾಮೀಜಿ ಬಯಸಿದರು. ''ದೇಶವೇ ನಿಮ್ಮ ಆರಾಧ್ಯ ದೈವವಾಗಲಿ, ಭಾರತದ ಎಲ್ಲ ಪ್ರಜೆಗಳು ನಿಮ್ಮ ಸಹೋದರ, ಸಹೋದರಿಯರು. ಜಾತಿ, ಮತ, ಧರ್ಮ, ಬಡವ, ನಿರಕ್ಷರಕುಕ್ಷಿ ಎಂಬ ಭೇದಗಳನ್ನು ತೊಡೆದುಹಾಕಿ ವಿಶ್ವಮಾನವರಾಗಬೇಕು ನಾವು — ಅಂತಹ ಸಮಾಜ ನಮ್ಮದಾಗಬೇಕು'' ಎನ್ನುತ್ತಾರೆ ಸ್ವಾಮಿ ವಿವೇಕಾನಂದರು.

ವಿವಿಧ ಹಂತದಲ್ಲಿರುವ ವ್ಯಕ್ತಿಗಳಿಗೆ ಸ್ಮೃತಿಶಾಸ್ತ್ರಗಳು ವಿಧಿಸಿರುವ ನೀತಿ, ನಿಯಮಗಳ ಬಗ್ಗೆ ಸ್ವಾಮೀಜಿ ಹೀಗೆ ಹೇಳುತ್ತಾರೆ:

‘‘ಹಿಂದೂಗಳು ತಮ್ಮ ನೈತಿಕ ಪದ್ಧತಿಯಲ್ಲಿ, ಬಹು ಪುರಾತನ ಕಾಲದಿಂದಲೂ ಈ ವಾಸ್ತವಾಂಶವನ್ನು ಗಮನಿಸಿದ್ದಾರೆ. ಅವರ ಶಾಸ್ತ್ರಗಳಲ್ಲಿಯೂ, ಗ್ರಂಥಗಳಲ್ಲಿಯೂ ಭಿನ್ನ ಭಿನ್ನ ಆಶ್ರಮದವರಿಗೆ – ಗೃಹಸ್ಥರು, ಸಂನ್ಯಾಸಿಗಳು, ಬ್ರಹ್ಮಚಾರಿಗಳು – ಇವರಿಗೆ ಭಿನ್ನ ಭಿನ್ನ ನಿಯಮಗಳು ವಿಧಿಸಲ್ಪಟ್ಟಿವೆ.

‘‘..ಹಿಂದುವು ಬ್ರಹ್ಮಚಾರಿಯಾಗಿ ಜೀವನಯಾತ್ರೆಯನ್ನು ಮೊದಲು ಮಾಡುತ್ತಾನೆ. ತರುವಾಯ ಮದುವೆ ಮಾಡಿಕೊಂಡು ಗೃಹಸ್ಥನಾಗುತ್ತಾನೆ. ವಯಸ್ಸಾದ ಮೇಲೆ ನಿವೃತ್ತನಾಗುತ್ತಾನೆ. ಕೊನೆಯಲ್ಲಿ ಪ್ರಪಂಚವನ್ನು ತ್ಯಜಿಸಿ ಸಂನ್ಯಾಸಿಯಾಗುತ್ತಾನೆ. ಈ ಪ್ರತಿಯೊಂದು ಆಶ್ರಮಕ್ಕೂ ಕೆಲವು ಕರ್ತವ್ಯಗಳಿವೆ.’’

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೧, ಪು. ೪೨–೪೩)*

## ಗೃಹಸ್ಥರ ಹಾಗೂ ಸಂನ್ಯಾಸಿಗಳ ಆದರ್ಶ

ಸಾಮಾನ್ಯ ನಂಬಿಕೆಯಂತೆ ಸಂನ್ಯಾಸಾಶ್ರಮವೇ ಶ್ರೇಷ್ಠ, ಉಳಿದ ಆಶ್ರಮಗಳೆಲ್ಲ ಸಾಧಾರಣವಾದವು ಎಂಬ ಭಾವನೆಯನ್ನು ಸ್ವಾಮೀಜಿ ಸ್ಪಷ್ಟವಾಗಿ ಅಲ್ಲಗಳೆಯುತ್ತ, ಅವರವರ ಸ್ಥಾನದಲ್ಲಿ ಪ್ರತಿಯೊಬ್ಬರೂ ದೊಡ್ಡವರೇ ಎಂಬುದನ್ನು ಹಲವು ನಿದರ್ಶನಗಳೊಂದಿಗೆ ವಿವರಿಸುತ್ತಾರೆ. ಈ ಸಂದರ್ಭದಲ್ಲಿ ಅವರು ‘ಮಹಾನಿರ್ವಾಣ ತಂತ್ರ’ವೆಂಬ ಗ್ರಂಥದಿಂದ ಆಯ್ದ ವಾಕ್ಯಗಳನ್ನು ಉದ್ಧರಿಸಿ, ಗೃಹಸ್ಥನ ಕರ್ತವ್ಯಗಳೇನು ಎಂಬುದನ್ನು ವಿವರಿಸುತ್ತಾರೆ.

ಮೊದಲಲ್ಲಿ ಗೃಹಸ್ಥನು ಭಗವಂತನ ಸಾಕ್ಷಾತ್ಕರಿಸಿಕೊಳ್ಳಲು ಯತ್ನಿಸಬೇಕು ಎನ್ನುತ್ತಾರೆ. ತನ್ನ ಕರ್ಮಫಲಗಳನ್ನು ಈಶ್ವರನಿಗೆ ಅರ್ಪಿಸುವ ಮೂಲಕ ಅವನು ಜೀವನದಲ್ಲಿ ಶಾಂತಿ, ನೆಮ್ಮದಿ, ಸಾರ್ಥಕ್ಯಗಳನ್ನು ಹೊಂದಬೇಕು ಎನ್ನುತ್ತಾರೆ. ಅನಂತರ ತಂದೆ ತಾಯಿಗಳ ಸೇವೆ, ಅವರಿಗೆ ಗೌರವ ತೋರಿಸುವುದು, ತನ್ನ ಮಡದಿ ಮಕ್ಕಳ ಪಾಲನೆ, ಮಕ್ಕಳನ್ನು ಪ್ರೀತಿಯಿಂದ ಹಾಗೂ ಜವಾಬ್ದಾರಿಯಿಂದ ಬೆಳೆಸುವುದು. ಅದರ ಬಳಿಕ ಅಣ್ಣ, ತಮ್ಮಂದಿರ ವಿಷಯವಾಗಿ ಕರ್ತವ್ಯ ನಿರ್ವಹಿಸಬೇಕು. *(ಅಲ್ಲೇ, ಪು.೪೫)*

ಉದ್ಯೋಗಶೀಲತೆ, ದೈಹಿಕ ಪರಿಶುದ್ಧತೆ, ಶತ್ರುಗಳ ವಿಷಯದಲ್ಲಿ ಶೂರನಂತೆ ವರ್ತಿಸುವುದು, ಗೆಳೆತನ ಹೇಗಿರಬೇಕು ಎಂಬ ವಿಷಯಗಳ ಬಗ್ಗೆ ಸ್ವಾಮೀಜಿ ಹೇಳುತ್ತಾ, ಅವನ ವ್ಯವಹಾರ, ನಡೆನುಡಿ ಎಚ್ಚರಿಕೆಯಿಂದ ಕೂಡಿದ್ದಾಗಿರಬೇಕು ಎನ್ನುತ್ತಾರೆ.

ಸ್ವಾಮೀಜಿ ಮುಂದೆ ಹೇಳುವ ಪ್ರಮುಖ ಅಂಶವೆಂದರೆ, ತನ್ನ ಹಣವನ್ನು ವಿನಿಯೋಗ ಮಾಡುವಲ್ಲಿ ಗೃಹಸ್ಥನು ಹೊಂದಿರಬೇಕಾದ ವಿವೇಚನೆ. ‘‘ಇಡೀ ಸಮಾಜಕ್ಕೇ ಗೃಹಸ್ಥನು ತಳಹದಿ, ಊರುಗೋಲು. ಮುಖ್ಯವಾಗಿ ಹಣ ಸಂಪಾದನೆ ಮಾಡುವವನು ಆತನೇ. ಬಡವರು, ಬಲಹೀನರು ಕಾರ್ಯ ಮಾಡಲಾರದ ಮಕ್ಕಳುಮರಿ, ಹೆಂಗಸರು — ಇವರೆಲ್ಲರಿಗೆ ಗೃಹಸ್ಥನೇ ಆಶ್ರಯ. ಆದುದರಿಂದ ಆತನು ಮಾಡತಕ್ಕ ಕೆಲವು ಕರ್ತವ್ಯಗಳಿರಲೇಬೇಕು’’ ಎನ್ನುತ್ತಾರೆ ಸ್ವಾಮೀಜಿ.

ಗೃಹಸ್ಥನ ಜೀವನ ಅಷ್ಟೇನೂ ಸುಲಭವಲ್ಲ, ಅನೇಕ ಬಗೆಯ ಕರ್ತವ್ಯಗಳನ್ನು ನಿರ್ವಹಿಸುತ್ತ, ಹಲವು ತ್ಯಾಗಗಳನ್ನೂ ಅವನು ಮಾಡಬೇಕಾಗುವುದು. ತನ್ನ ಜವಾಬ್ದಾರಿಯಿಂದ ಅವನು ಇತರರಿಗೆ ಆಸರೆಯಾಗುತ್ತಾನೆ. ಸಮಾಜಕ್ಕೆ ಹಿತವಾಗುವ ಕಾರ್ಯಗಳಲ್ಲಿಯೂ ಅವನು ತೊಡಗಿಕೊಂಡಿರಬೇಕು; ಇದರಿಂದ ಜಗತ್ತಿಗೆ ಒಳಿತಾಗುವುದು, ಸ್ವತಃ ತನಗೂ ಶ್ರೇಯಸ್ಸು ಉಂಟಾಗುವುದು.

ಮುಂದುವರಿದು ಸ್ವಾಮೀಜಿ ಹೇಳುತ್ತಾರೆ, ‘‘ಗೃಹಸ್ಥನು ಸತ್ಯವನ್ನು ನುಡಿಯಬೇಕು. ಜನಗಳಿಗೆ ಆಪ್ಯಾಯಮಾನವಾಗಿರುವ ಮೃದುವಚನಗಳಿಂದ ಮತ್ತಗೆ ಮಾತನಾಡಬೇಕು. ಇದರಿಂದ ಇತರರಿಗೆ ಒಳ್ಳೆಯದುಂಟಾಗುವುದು. ಇತರರ ವ್ಯವಹಾರಗಳನ್ನು ಕುರಿತು ಆತ ಮಾತನಾಡಬಾರದು.’’ ಹೀಗೆ ಅವನ ನಡೆನುಡಿ ಕೂಡ ಅತ್ಯಂತ ಮುಖ್ಯವಾಗಿರುತ್ತದೆ.

ಗೃಹಸ್ಥನಾಗಲಿ, ಸಂನ್ಯಾಸಿಯಾಗಲಿ ಅವನವನ ಸ್ಥಾನದಲ್ಲಿ ದೊಡ್ಡವನು ಎಂಬುದನ್ನು ವ್ಯಕ್ತಪಡಿಸುವ ಒಂದು ಸುಂದರವಾದ ಕಥೆಯನ್ನು ಸ್ವಾಮೀಜಿ ‘ಕರ್ಮಯೋಗ’ದಲ್ಲಿ ಹೇಳುತ್ತಾರೆ. ಒಂದು ಸ್ವಯಂವರದಲ್ಲಿ ರಾಜಕುಮಾರಿಯೊಬ್ಬಳು ಯುವಕ ಸಂನ್ಯಾಸಿಯೊಬ್ಬನನ್ನು ವರಿಸಲು ಅವನಿಗೆ ವರಮಾಲೆ ಹಾಕುತ್ತಾಳೆ. ಆದರೆ ಆ ಸಂನ್ಯಾಸಿ ಅದನ್ನು ಒಲ್ಲದೆ ಓಡಿಹೋಗಿ, ಕಾಡಿನಲ್ಲಿ ಮರೆಯಾಗುತ್ತಾನೆ. ಆದರೆ ಕಾಡಿನಲ್ಲಿ ಅವನು ಹಾಗೂ ಇನ್ನಿತರರು, ಒಂದೇ ಕುಟುಂಬದ ಮೂರು ಹಕ್ಕಿಗಳು ಅತಿಥಿಗಳ ಆಹಾರಕ್ಕಾಗಿ ತಮ್ಮ ಪ್ರಾಣತ್ಯಾಗ ಮಾಡಿದ ದೃಶ್ಯವನ್ನು ನೋಡುತ್ತಾರೆ. ಈ ಮೂಲಕ ಸಂನ್ಯಾಸಿಯ ತ್ಯಾಗಕ್ಕಿಂತ ಗೃಹಸ್ಥರ ತ್ಯಾಗ ಯಾವ ರೀತಿಯಲ್ಲೂ ಕಡಿಮೆಯದಲ್ಲ ಎಂಬುದನ್ನು ಅರಿತುಕೊಳ್ಳುತ್ತಾರೆ.

## ಸ್ವಾಮೀಜಿ ಕಂಡ ಆದರ್ಶ ಗೃಹಸ್ಥರು

ಸ್ವಾಮೀಜಿ ವಿವರಿಸುವ ಗೃಹಸ್ಥ ಧರ್ಮ ಕೇವಲ ಅವರ ಓದಿನಿಂದ ಅಥವಾ ಶಾಸ್ತ್ರಜ್ಞಾನದಿಂದ ಮೂಡಿಬಂದಿದ್ದಲ್ಲ; ಸ್ವತಃ ತಾವೇ ಕಂಡ ಅನೇಕ ಮಂದಿ ಆದರ್ಶ ಗೃಹಸ್ಥರ ನಿದರ್ಶನ ಸ್ವಾಮೀಜಿಯವರ ಮುಂದಿತ್ತು. ವಿಶೇಷವಾಗಿ ತಮ್ಮ ತಾಯಿ ಹಾಗೂ ತಂದೆಯವರಿಂದ ಸ್ವಾಮೀಜಿ ಕಲಿತ ಅನೇಕ ಅಂಶಗಳು ಅವರ ಮೇಲೆ ಅಚ್ಚಳಿಯದ ಮುದ್ರೆಯನ್ನೊತ್ತಿದ್ದವು. ‘‘ನನ್ನ ಜ್ಞಾನವೆಲ್ಲವೂ ಈ ರೀತಿ ವಿಕಸನ ಹೊಂದಲು ನನ್ನ ತಾಯಿಯೇ ಕಾರಣ’’ ಎಂದು ಸ್ವಾಮೀಜಿ ತನ್ನ ತಾಯಿ ಭುವನೇಶ್ವರೀ ದೇವಿಯ ಬಗ್ಗೆ ಹೆಮ್ಮೆಯಿಂದ ಹೇಳುತ್ತಿದ್ದರು. ಅದೇರೀತಿ, ತಂದೆ ವಿಶ್ವನಾಥ ದತ್ತರ ಗಂಭೀರ ವ್ಯಕ್ತಿತ್ವ ಅವರ ಬೆಳವಣಿಗೆಗೆ ಅಪಾರ ಪೋಷಣೆಯನ್ನಿತ್ತಿತು.

ಒಂದು ಬಾರಿ ಯುವಕ ನರೇಂದ್ರ, ಹಣದ ವಿಷಯದಲ್ಲಿ ಧಾರಾಳಿಯಾಗಿದ್ದ ತನ್ನ ತಂದೆಯ ಬಳಿಗೆ ಹೋಗಿ ಕೇಳಿದ, ‘‘ಅಪ್ಪಾ, ನನಗಾಗಿ ಏನು ಮಾಡಿದ್ದೀ ನೀನು?’’ ಮರುಕ್ಷಣದಲ್ಲೇ ಚಿಮ್ಮಿತು ತಂದೆಯ ಉತ್ತರ — ‘‘ಹೋಗು, ಆ ಕನ್ನಡಿಯ ಮುಂದೆ ನಿಂತು ನೋಡಿಕೊ.’’

ತನ್ನ ಶರೀರವನ್ನೇ ನೋಡಿಕೊಂಡ ನರೇಂದ್ರನಿಗೆ ಅರ್ಥವಾಯಿತು, ತನ್ನ ದಷ್ಟಪುಷ್ಟವಾದ ಶರೀರ, ಓಜಸ್ಸು, ತೇಜಸ್ಸು, ಶೌರ್ಯ, ವಿದ್ಯೆ, ಆತ್ಮವಿಶ್ವಾಸ... ಇವೇ ತನ್ನ ತಂದೆ ತನಗಿತ್ತ ಐಶ್ವರ್ಯ! ಬೆರಗಾದ ನರೇಂದ್ರ, ತನ್ನ ತಂದೆ ತನ್ನನ್ನು ಹೇಗೆ ಬೆಳೆಸಿದನೆಂಬುದನ್ನು ಆಗಲೇ ಗ್ರಹಿಸುವಂತಾಯಿತು.

ಸ್ವಾಮೀಜಿ ತನ್ನ ತಂದೆ, ತಾಯಿಯರಲ್ಲಿ ಶ್ರೇಷ್ಠ ಗೃಹಸ್ಥರ ಲಕ್ಷಣವನ್ನೆಲ್ಲ ಕಂಡುಕೊಂಡಿದ್ದರು. ಅದೇರೀತಿ, ಶ್ರೀರಾಮಕೃಷ್ಣರ ಹಾಗೂ ಶ್ರೀಮಾತೆಯವರ ದಿವ್ಯದಾಂಪತ್ಯದ ಆದರ್ಶ ಅವರ ಕಣ್ಣ ಮುಂದಿತ್ತು. ಆಧ್ಯಾತ್ಮಿಕ ಸಾಧನೆ ಮಾತ್ರವಲ್ಲ, ಎಲ್ಲರನ್ನೂ ಸಹಾನುಭೂತಿ, ಪ್ರೀತಿ, ಗೌರವಗಳಿಂದ ಕಾಣುವುದು, ಇತರರಿಗೆ ಸಹಾಯ ಮಾಡುವುದು, ಸ್ವಾರ್ಥವಿಲ್ಲದೆ ಬದುಕುವುದು — ಈ ಎಲ್ಲ ಆದರ್ಶಗಳನ್ನು ಅವರಲ್ಲಿ ಕಂಡರು. ಅದೇರೀತಿ ಶ್ರೀರಾಮಕೃಷ್ಣರಲ್ಲಿಗೆ ಬರುತ್ತಿದ್ದ ಗೃಹೀಭಕ್ತರಲ್ಲಿ ಅನೇಕರು ಸ್ವಾಮೀಜಿಯವರ ಒಡನಾಡಿಯಾಗಿದ್ದರು. ಸ್ಮೃತಿಗಳೇ ಮೊದಲಾದ ಶಾಸ್ತ್ರಗಳಲ್ಲಿ ಹೇಳಿರುವ ಗೃಹಸ್ಥ ಧರ್ಮ, ಆದರ್ಶಗಳ ಬೆಳಕಿನಲ್ಲಿ ಇವರ ಜೀವನವನ್ನು ಅರ್ಥಮಾಡಿಕೊಂಡು ಸ್ವಾಮೀಜಿ ತಮ್ಮದೇ ಆದ ರೀತಿಯಲ್ಲಿ ಇಂತಹ ಆದರ್ಶವನ್ನು ಪ್ರಪಂಚದ ಮುಂದಿಟ್ಟರು. ಸ್ವಾಮೀಜಿಯವರ ಕೃತಿಗಳಲ್ಲಿ, ವಿಶೇಷವಾಗಿ ಪ್ರವಚನಗಳು ಹಾಗೂ ಪತ್ರಗಳಲ್ಲಿ ಅವರಿಗೆ ಭಾರತೀಯ ಸಮಾಜ, ಕುಟುಂಬ ಪದ್ಧತಿ, ಧಾರ್ಮಿಕ ಆಚರಣೆಗಳು, ಅವರ ಆಧ್ಯಾತ್ಮಿಕತೆ — ಈ ವಿಚಾರವಾಗಿ ಇದ್ದ ಅತ್ಯಂತ ಆಳವಾದ ಜ್ಞಾನ ವ್ಯಕ್ತವಾಗುವುದು. ಈ ಹಿನ್ನೆಲೆಯಲ್ಲಿ ಅವರು ಪಾಶ್ಚಾತ್ಯ ಜಗತ್ತಿನ ಸಮಾಜದೊಂದಿಗೆ ಇಲ್ಲಿನ ಸಮಾಜವನ್ನು ಹೋಲಿಸಿ ನೋಡುತ್ತ, ಇವರಡೂ ಸಮಾಜಗಳ ಲೋಪದೋಷಗಳನ್ನು ಪರಿಶೀಲಿಸುತ್ತ ತಮ್ಮ ಮುಂದಿರುವ ಭವಿಷ್ಯ ಭಾರತಕ್ಕೆ ತಕ್ಕುದಾದ ಆದರ್ಶ ಸಮಾಜವನ್ನು ಕಂಡುಕೊಂಡರು. ಈ ಹಿನ್ನೆಲೆಯಲ್ಲಿ ಗೃಹಸ್ಥರ ಕರ್ತವ್ಯಗಳ ಬಗ್ಗೆ ಸ್ವಾಮೀಜಿ ಹೇಳಿರುವ ಮಾತುಗಳಿಗೆ ವಿಶೇಷವಾದ ಮಹತ್ವವಿದೆ.

ಸ್ವಾಮೀಜಿಯವರು ನಮ್ಮ ಮುಂದಿಟ್ಟ ಗೃಹಸ್ಥ ಧರ್ಮದ ಒಟ್ಟು ಸಾರವನ್ನು ವ್ಯಕ್ತಪಡಿಸುವ ಈ ನುಡಿಗಳೊಂದಿಗೆ ಈ ಲೇಖನವನ್ನು ಸಮಾಪ್ತಿಗೊಳಿಸಬಹುದು:

''ಗೃಹಸ್ಥನು ಈ ಜೀವನದ, ಸಮಾಜದ ಕೇಂದ್ರ. ಆತನಿಗೆ ಐಶ್ವರ್ಯವನ್ನು ಗಳಿಸಿ ಅದನ್ನು ಸತ್ಕಾರ್ಯದಲ್ಲಿ ವಿನಿಯೋಗಿಸುವುದು ಒಂದು ಉಪಾಸನೆ. ಏಕೆಂದರೆ, ನಿರ್ದೋಷವಾದ ಉದ್ದೇಶ ಸಾಧನೆಗಾಗಿ ನಿರ್ದೋಷವಾದ ಉಪಾಯಗಳ ದ್ವಾರಾ ಸಿರಿವಂತನಾಗಲು ಪ್ರಯತ್ನಪಡುವ ಗೃಹಸ್ಥನು, ಯತಿಯು ಗುಹೆಯಲ್ಲಿದ್ದುಕೊಂಡು ಮಾಡುವ ಪ್ರಾರ್ಥನೆಯನ್ನೇ, ತಾನೂ ಮುಕ್ತಿಲಾಭಕ್ಕಾಗಿ ಕಾರ್ಯತಃ ಮಾಡುತ್ತಿರುವನು. ಏಕೆಂದರೆ ಅವನಲ್ಲಿ ದೇವಭಕ್ತಿಯಿಂದ ಪ್ರೇರಿತವಾದ ಅದೇ ಆತ್ಮಾರ್ಪಣೆ ಮತ್ತು ತ್ಯಾಗವನ್ನು ಕಾಣುತ್ತೇವೆ.'' *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೧, ಪು. ೪೬-೪೭)* ❁



ಹೃದಯದಲ್ಲಿ ಕಾಮನೆ ಇತ್ತು ಎಂದರೆ, ಎಷ್ಟೇ ಸಾಧನೆ ಮಾಡಿದರೂ ಭಗವಂತನ ಸಾಕ್ಷಾತ್ಕಾರ ದೊರೆಯದು. ಆದರೆ ಒಂದು ವಿಷಯ, ಆತನ ಕೃಪೆಯೊಂದು ದೊರೆತುಬಿಟ್ಟದ್ದೇ ಆದರೆ, ಆತ ಮಾತ್ರ ಕರುಣಿಸುವುದೇ ಆದರೆ, ಈ ಕ್ಷಣವೇ ಆತನ ಸಾಕ್ಷಾತ್ಕಾರ ದೊರೆತುಬಿಡುತ್ತದೆ.

— ಶ್ರೀರಾಮಕೃಷ್ಣರು



ಹೂವನ್ನು ಅಲುಗಾಡಿಸುತ್ತ ಇದ್ದರೆ ಅದರ ಸುಗಂಧ ಹೇಗೆ ಹೊರಹೊಮ್ಮುವುದೋ, ಶ್ರೀಗಂಧ ತೇಯುತ್ತ ಹೇಗೆ ಅದರ ಸುವಾಸನೆ ಹೊರಗೆ ಬರುವುದೋ, ಹಾಗೇ ಭಗವಂತನ ತತ್ತ್ವವನ್ನು ಆಲೋಚನೆ ಮಾಡುತ್ತ ತತ್ತ್ವಜ್ಞಾನದ ಉದಯವಾಗುವುದು. ಮನಸ್ಸಿನ ಆಸೆಗಳೆಲ್ಲ ನಾಶವಾದ ಕ್ಷಣವೇ ಸಾಕ್ಷಾತ್ಕಾರವುಂಟಾಗುವುದು.

— ಶ್ರೀಮಾತೆ ಶಾರದಾದೇವಿ



ಭರತಖಂಡದಲ್ಲಿ ಆದರ್ಶ ಮಹಿಳೆ ತಾಯಿ. ಮಹಿಳೆ ಮೊದಲು ತಾಯಿ, ಅನಂತರವೂ ತಾಯಿಯೇ. ಹಿಂದೂ ಮನಸ್ಸಿನಲ್ಲಿ ಮಹಿಳೆ ಎಂಬ ಶಬ್ದ ತಾಯಿತನವನ್ನು ನೆನಪಿಗೆ ತರುವುದು. ದೇವರನ್ನು ತಾಯಿ ಎಂದು ಕರೆಯುವರು.

— ಸ್ವಾಮಿ ವಿವೇಕಾನಂದ